**ದಿನಾಂಕಃ 27.09.2022**
**ಸ್ಪೆಷಲ್ ಕೇಸ್ ನಂ. 54/2019**
**ಪ್ರಾಸಾಃ 1**

**(ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಮುಂದುವರಿದ ಪಾಟೀಸವಾಲು ಆರೋಪಿ ಪರ ಶ್ರೀ ಎ.ಜಿ.ಜಿ., ವಕೀಲರಿಂದಃ**

ಈ ಹಂತದಲ್ಲಿ ಆರೋಪಿ ಪರ ವಕೀಲರು ನ್ಯಾಯಾಲಯದ ಎದುರು ಇರುವ ಕಡತದಲ್ಲಿ ಎಫ್.ಎಸ್.ಎಲ್ ವರದಿ ಇಲ್ಲದ ಕಾರಣ ತಾನು ಪಾಟೀ ಸವಾಲು ಮಾಡಲು ಕಾಲಾವಕಾಶ ಬೇಕೆಂದು ಕೋರಿರುತ್ತಾರೆ. ಸರ್ಕಾರಿ ಅಭಿಯೋಜಕರು ಸದರಿ ಕೋರಿಕೆಗೆ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಉಭಯ ಪಕ್ಷದವರ ವಾದವನ್ನು ಆಲಿಸಿದ ನಂತರ ಎಫ್.ಎಸ್.ಎಲ್ ವರದಿಯ ಅಗತ್ಯ ಈ ಹಂತದಲ್ಲಿ ಇಲ್ಲ ಎಂದು ನ್ಯಾಯಾಲಯ ಮನಗಂಡು ಮತ್ತು ಎಫ್.ಎಸ್.ಎಲ್ ವರದಿಯ ಸತ್ಯ ಸತ್ಯತೆಯನ್ನು ಯಾರು ವರದಿ ನೀಡಿರುತ್ತಾರೋ ಆ ಸಾಕ್ಷಿದಾರರು ಮಾತ್ರ ಹೇಳಬಹುದು ಎಂದು ಮನಗಂಡು ಆರೋಪಿ ಪರ ವಕೀಲರ ಕೋರಿಕೆಯನ್ನು ತಿರಸ್ಕರಿಸಲಾಯಿತು.

ನಾನು ನನ್ನ ಮಗಳಿಗೆ  ನಮ್ಮ ಮನೆಯ ಡ್ರೈವರ್ ಯೊಗೇಶ್ ಎಂಬುವವರು ಲೈಂಕ ದೌರ್ಜನ್ಯ ಎಸಗಲು ಪ್ರಯತ್ನ ಪಟ್ಟಾಗ ನಾನು ಅವರ ವಿರುದ್ದ ದೂರು ನೀಡಿದ್ದೆ ಎಂದರೆ ಸಾಕ್ಷಿದಾರರ ಆ ಸಂದರ್ಭದಲ್ಲಿ ನಾನು ನ್ಯಾಯಾಂಗ ಬಂಧನದಲ್ಲಿ ಇದ್ದೆ ಮತ್ತು ಆ ಕಾರಣದಿಂದ ನನ್ನ ಹೆಂಡತಿ ಅವರ ವಿರುದ್ದ ದೂರು ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಮೇಲೆ ಹಾಕಿದ ಕೊಲೆ ಪ್ರಯತ್ನದ ಕೇಸಿಗೆ ವಿರುದ್ದವಾಗಿ ನಾನು ಯೋಗೇಶ್ ಅವರ ವಿರುದ್ದ ಮೇಲೆ ಹೇಳಿದ ದೂರು ಕೊಟ್ಟಿದ್ದೇನೆ ಅಂದರೆ ಸರಿಯಲ್ಲ. ನಾನು ನಿರಂತರವಾಗಿ ಹಲವಾರು ವ್ಯಕಿಗಳ ಮೇಲೆ ಸುಳ್ಳು ಕೇಸುಗಳನ್ನು ಹಾಕಿಸುತ್ತಿದ್ದೇನೆ ಅಂದರೆ ಸರಿಯಲ್ಲ.

ನಾನು ಕಕ್ಕೆ ಹೊಳೆಯಲ್ಲಿ ನಿಂತು ಕೊಂಡಾಗ ಪ್ರಾಸಾ-2 ಅವರ ಜೊತೆ ಸುಮಾರು 15 ನಿಮಿಷಗಳ ಕಾಲ ಮಾತಾನಾಡುತ್ತಿದ್ದೆ.  ಸಾಕ್ಷಿ ಮುಂದುವರೆದು ನಾನು ಮತ್ತು ನನ್ನ ತಮ್ಮ ಅಲ್ಲಿಗೆ ಬಂದಾಗ ನಾವು ಚಾಸಾ-3 ರವರ ಜೊತೆ

ಮಾತಾನಾಡುತ್ತಿದ್ದೆವು ಎಂದು ನುಡಿಯುತ್ತಾರೆ. ನಾನು ಸಂಜೆ 5.45 ಗಂಟೆಯಿಂದ 6.00 ಗಂಟೆಯವರೆಗೆ ಅವರ ಜೊತೆ ಮಾತಾನಾಡುತ್ತಿದ್ದೆ. ಕಕ್ಕೆ ಹೊಳೆಯಿಂದ ನಮ್ಮ ಮನೆಗೆ ಸುಮಾರು ಒಂದು ಕಾಲು ಕಿ.ಮೀ ದೂರ ಇದೆ. ಬೈಕಿನಲ್ಲಿ ಹೋದರೆ 5 ನಿಮಿಷದಲ್ಲಿ ನಮ್ಮ ಮನೆಗೆ ತಲುಪಬಹುದು. ಆರೋಪಿಯ ಮನೆಗೂ ನಮ್ಮ ಮನೆಗೂ 5 ನಿಮಿಷ ದೂರ ಇದೆ. ಆರೋಪಿತರು ತಮ್ಮ ಮನೆಯಿಂದ ಎಲ್ಲಿಗೆ ಹೋಗಬೇಕಾದರೂ ರಾಜಣ್ಣನವರ ಅಂಗಡಿಯ ಎದುರಿನಿಂದ ಹೋಗಬೇಕೆಂದರೆ ಸರಿ. ನಾನು ಫೋನ್ ಮಾಡಿದ ನಂತರ ಆರೋಪಿ ಬರುವವರೆಗೆ ನಾನು ಅಂಗಡಿಯ ಹಿಂಭಾಗದಲ್ಲಿ ನಿಂತಿದ್ದೆ, ಆ ಸಮಯದಲ್ಲಿ ಆರೋಪಿ ಬರುವವರೆಗೂ ಅಂಗಡಿಯಲ್ಲಿ ಯಾರು ಇದ್ದಿರಲಿಲ್ಲ.

ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ಸಾಕ್ಷಿಗೆ ಭತ್ಯೆ ನೀಡುವ ಷರತ್ತಿನೊಂದಿಗೆ ಮುಂದೂಡಲಾಯಿತು.

**<u>ಮರುವಿಚಾರಣೆಃ</u>** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

Sd/-xxx
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ.